# ವ್ಯಕ್ತಿತ್ವ

Shri S R Muganurmath
HOD Dept. of Psychology

# ವ್ಯಕ್ತಿತ್ವ

- ವ್ಯಕ್ತಿತ್ವವು ವ್ಯಕ್ತಿಯ ವರ್ತನೆ ಹಾಗೂ ವ್ಯವಹಾರಗಳನ್ನು ದಟ್ಟವಾಗಿ ಪ್ರಭಾವಿಸುವ ಸರ್ವ ಮಾನಸಿಕ ಮತ್ತು ಶಾರೀರಿಕ ಅಂಶಗಳ ಪ್ರಮುಖ ಪರಿಕಲ್ಪನೆಯಾಗಿದೆ. ಇಂದು ನಮ್ಮ ವಿಶ್ವದಲ್ಲಿ ಕಾಣುತ್ತಿರುವ ಅಸಮಾನತೆ, ವಿಷಮತೆ, ವೈಷಮ್ಯಗಳಿಗೆ ಮಾನವನ ವ್ಯಕ್ತಿತ್ವದ ದೋಷಗಳೇ ಕಾರಣ ಎಂಬ ಒಂದು ವಾದವಿದೆ.
- ಮಾನವನ ಉಳಿವು ಮತ್ತು ಬೆಳವಣಿಗೆಗೆ ಸಂಬಂಧಿಸಿದಂತೆ ಸುಧಾರಣೆ ತರಲು ವ್ಯಕ್ತಿತ್ವದ ಕುರಿತು ಸಮಗ್ರ ಅರಿವಿನ ಅಗತ್ಯವಿದೆ ಎಂದು ಮನೋವಿಜ್ಞಾನಿಗಳು ವಾದಿಸುತ್ತಿದ್ದಾರೆ. ವ್ಯಕ್ತಿಯ ವ್ಯಕ್ತಿತ್ವವು ಆತನ/ಅವಳ ಶಾರೀರಿಕ, ಮಾನಸಿಕ, ಸಾಮಾಜಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಅಂಶಗಳ ವಿಶಿಷ್ಟ ಸಮ್ಮಿಲನದಿಂದ ರೂಪುಗೊಳ್ಳುತ್ತದೆ.

# ವ್ಯಕ್ತಿತ್ವ

- ಅದು ಜೀವನದಾದ್ಯಂತ ಬೆಳೆದು ಬದಲಾವಣೆಗಳಿಗೆ ಒಳಗಾಗುವ ಪರಿವರ್ತನಶೀಲ ಆಂತರಿಕ ವ್ಯವಸ್ಥೆಯಾಗಿದೆ.  ವ್ಯಕ್ತಿತ್ವವು ವ್ಯಕ್ತಿಯ ಬಾಳಿನ ತತ್ವ-ತಂತ್ರಗಳನ್ನು ನಿರ್ಣಯಿಸುವ ಸಂಕೀರ್ಣ ಮನೋದೈಹಿಕ ವ್ಯವಸ್ಥೆಯಾಗಿದೆ.
- ಹಿಗಾಗಿ ವ್ಯಕ್ತಿತ್ವದ ಕುರಿತು ತಿಳಿದುಕೊಳ್ಳುವುದರಿಂದ ವ್ಯಕಿಯ್ತು ತನ್ನ ಆರೋಗ್ಯ, ಶಕ್ತಿ-ಸಾಮರ್ಥ್ಯ, ಸಮಾಯೋಜನೆ, ಸಾಧನೆ ಹೊಂದಾಣಿಕೆ ಹಾಗೂ ಸಾಮರಸ್ಯಗಳನ್ನು ಸಂವರ್ಧಿಸಲು ಸಾಧ್ಯವಿದೆ. ಪ್ರಿಯ ವಿದ್ಯಾರ್ಥಿಗಳೆ ಬನ್ನಿ, ಇಂಥ ಬಹುಮಹತ್ವದ ಪರಿಕಲ್ಪನೆಯಾದ ವ್ಯಕ್ತಿತ್ವದ ಕುರಿತು ತಿಳಿಯಲು ನಿಮಗೆ ಪ್ರೀತಿಯ ಆಮಂತ್ರಣ.

# ªÀåQÛvÀézÀ ªÁåSÉåUÀ¼ÀÄ

- ವ್ಯಕ್ತಿತ್ವವು ವ್ಯಕ್ತಿಯ ವಿವಿಧ ಶಾರೀರಿಕ, ಮಾನಸಿಕ ಶಕ್ತಿಗಳ ಸ್ಥಿರ ಮತ್ತು ಸಬಲ ಸಂಯೋಜನೆಯಾಗಿದೆ.
  --ಎಚ್. ಜೆ. ಐಸೆಂಕ್.
- ವ್ಯಕ್ತಿಯ ಆಂತರ್ಯದೊಳಗೆ ರೂಪುಗೊಂಡಿರುವ ಸಂಕೀರ್ಣ ಮತ್ತು ಪರಿವರ್ತನಶೀಲವಾದ ಮನೋ ಶಾರೀರಿಕ ಸಂಘಟನೆಯೇ ವ್ಯಕ್ತಿತ್ವ, ಎಂದು ಡಾ.ಎಂ.ಬಸವಣ್ಣ ವ್ಯಾಖ್ಯಾನಿಸಿದ್ದಾರೆ.

# ವ್ಯಕ್ತಿತ್ವದ ವ್ಯಾಖ್ಯೆಗಳು

- ಡೇಶಿಯಲ್  ಪ್ರಕಾರ "ಒಬ್ಬ ವ್ಯಕ್ತಿಯ ವ್ಯಕ್ತಿತ್ವವೆಂದರೆ ಆತನ ಸಹಚರರು ನಿರಂತರವಾಗಿ ಅವಲೋಕಿಸಿ ಗುರುತಿಸಲಾದ ಅವನ ವರ್ತನೆಯ ಸುಸಂಘಟಿತವಾದ ಸಮಗ್ರ ಚಿತ್ರಣ."
- ಆಲ್ಪೋರ್ಟ ನ ಪ್ರಕಾರ ವ್ಯಕ್ತಿತ್ವವೆಂದರೆ "ವ್ಯಕ್ತಿಯು ತನ್ನ ಪರಿಸರಕ್ಕೆ ಮಾಡಿಕೊಳ್ಳುವ ವಿಶಿಷ್ಟ ಹೊಂದಾಣಿಕೆಯನ್ನು ನಿರ್ಧರಿಸುವ ಮನೋದೈಹಿಕ ವ್ಯವಸ್ಥೆಗಳ ಪರಿವರ್ತನಶೀಲವಾದ ಸಂಘಟನೆ".

# ವ್ಯಕ್ತಿತ್ವದ ವ್ಯಾಖ್ಯೆಗಳು

- ಫ್ರಾಯ್ಡ್ ನು "ಹುಟ್ಟು ಪ್ರವೃತ್ತಿ (ಇದ್) ಸಾಮಾಜಿಕ ಅರಿವು (ಇಗೊ) ಮತ್ತು ಸಾಮಾಜಿಕ ಆದರ್ಶ (ಸುಪರ್ ಈಗೊ) ಗಳ ನಡುವಿನ ಐಕ್ಯತೆ ಹಾಗೂ ಸಮತೋಲನವೇ ವ್ಯಕ್ತಿತ್ವ" ಎನ್ನುತ್ತಾನೆ.
- ಆರ್. ಬಿ. ಕ್ಯಾಟೆಲ್ ನು "ನಿಗದಿತ ಸನ್ನಿವೇಶದಲ್ಲಿ ಒಬ್ಬ ವ್ಯಕ್ತಿ ಏನು ಮಾಡುತ್ತಾನೆ ಎಂದು ಮುನ್ಸೂಚಿಸಲು ಜ್ಞಾನ ಅನುಮತಿ, ಹಾಗೂ ಅವಕಾಶ ನೀಡುವ ಅಂಶವೇ ವ್ಯಕ್ತಿತ್ವ" ಎನ್ನುತ್ತಾನೆ.

# ಈ ವ್ಯಾಖ್ಯೆಗಳ ಪ್ರಕಾರ ವ್ಯಕ್ತಿತ್ವವೆಂದರೆ

- ಈ ವ್ಯಾಖ್ಯೆಗಳಲ್ಲಿ ಪ್ರತಿಪಾದಿಸಿರುವ ಅಂಶಗಳ ಪ್ರಕಾರ ವ್ಯಕ್ತಿತ್ವವೆಂದರೆ ಒಬ್ಬ ವ್ಯಕ್ತಿಯ
- ಸರ್ವಗುಣಗಳ ಸಮ್ಮಿಶ್ರಿತ ರೂಪ
- ವಹಿಸುವ ಪಾತ್ರ ಹಾಗೂ ಧರಿಸುವ ಮುಖವಾಡ
- ಸಹಚರರು ಗುರುತಿಸಿರುವ ವರ್ತನೆಯ ಸುಸಂಘಟಿತ ಚಿತ್ರಣ
- ಹೊಂದಾಣಿಕೆಯನ್ನು ನಿರ್ಧರಿಸುವ ಮನೋದೈಹಿಕ ವ್ಯವಸ್ಥೆ
- ಸಾಮಾಜಿಕ ಪ್ರಭಾವಕ್ಕೆ ಒಳಗಾಗುವ ಹಾಗೂ ಪ್ರಭಾವಿಸುವ ಅಂಶ
- ಹುಟ್ಟುಗುಣ, ಸಾಮಾಜಿಕ ಅರಿವು ಮತ್ತು ಉನ್ನತ ಆದರ್ಶಗಳ ಐಕ್ಯತೆ
- ವರ್ತನೆಯನ್ನು ಮುನ್ಸೂಚಿಸಲು ಅವಕಾಶ ನೀಡುವ ಸಂಗತಿ
- ವಿವಿಧ ಅಂಶಗಳ ಸಂಕೀರ್ಣ ಮತ್ತು ಪರಿವರ್ತನಶೀಲವಾದ ಸಂಘಟನೆ.

# ವ್ಯಕ್ತಿತ್ವವನ್ನು ಪ್ರಭಾವಿಸುವ ಅಂಶಗಳು

- ವ್ಯಕ್ತಿತ್ವವು ಹಲವಾರು ಸಂಗತಿಗಳಿಂದ ಪ್ರಭಾವಿಸಲ್ಪಡುತ್ತದೆ. ಅವು ಈ ಕೆಳಗಿನಂತಿವೆ:
- ಅನುವಂಶೀಯತೆ
- ಪರಿಸರ
- ಪಾಲಕರ ಪ್ರಭಾವ
- ನಿರ್ನಾಳ ಗ್ರಂಥಿ ಸ್ರಾವಗಳು
- ದೈಹಿಕ ರಚನೆ/ರೂಪ

# ªÀåQÛvÀé

- ವ್ಯಕ್ತಿತ್ವವು ವ್ಯಕ್ತಿಯ ವರ್ತನೆ ಹಾಗೂ ವ್ಯವಹಾರಗಳನ್ನು ದಟ್ಟವಾಗಿ ಪ್ರಭಾವಿಸುವ ಸರ್ವ ಮಾನಸಿಕ ಮತ್ತು ಶಾರೀರಿಕ ಅಂಶಗಳ ಪ್ರಮುಖ ಪರಿಕಲ್ಪನೆಯಾಗಿದೆ. ಇಂದು ನಮ್ಮ ವಿಶ್ವದಲ್ಲಿ ಕಾಣುತ್ತಿರುವ ಅಸಮಾನತೆ, ವಿಷಮತೆ, ವೈಷಮ್ಯಗಳಿಗೆ ಮಾನವನ ವ್ಯಕ್ತಿತ್ವದ ದೋಷಗಳೇ ಕಾರಣ ಎಂಬ ಒಂದು ವಾದವಿದೆ. ಮಾನವನ ಉಳಿವು ಮತ್ತು ಬೆಳವಣಿಗೆಗೆ ಸಂಬಂಧಿಸಿದಂತೆ ಸುಧಾರಣೆ ತರಲು ವ್ಯಕ್ತಿತ್ವದ ಕುರಿತು ಸಮಗ್ರ ಅರಿವಿನ ಅಗತ್ಯವಿದೆ ಎಂದು ಮನೋವಿಜ್ಞಾನಿಗಳು ವಾದಿಸುತ್ತಿದ್ದಾರೆ . ವ್ಯಕ್ತಿಯ ವ್ಯಕ್ತಿತ್ವವು ಆತನ/ಅವಳ ಶಾರೀರಿಕ, ಮಾನಸಿಕ, ಸಾಮಾಜಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಅಂಶಗಳ ವಿಶಿಷ್ಟ ಸಮ್ಮಿಲನದಿಂದ ರೂಪುಗೊಳ್ಳುತ್ತದೆ

ಅದು ಜೀವನದಾದ್ಯಂತ ಬೆಳೆದು ಬದಲಾವಣೆಗಳಿಗೆ ಒಳಗಾಗುವ ಪರಿವರ್ತನಶೀಲ ಆಂತರಿಕ ವ್ಯವಸ್ಥೆಯಾಗಿದೆ. ವ್ಯಕ್ತಿತ್ವವು ವ್ಯಕ್ತಿಯ ಬಾಳಿನ ತತ್ವ-ತಂತ್ರಗಳನ್ನು ನಿರ್ಣಯಿಸುವ ಸಂಕೀರ್ಣ ಮನೋದೈಹಿಕ ವ್ಯವಸ್ಥೆಯಾಗಿದೆ. ಹಿಗಾಗಿ ವ್ಯಕ್ತಿತ್ವದ ಕುರಿತು ತಿಳಿದುಕೊಳ್ಳುವುದರಿಂದ ವ್ಯಕಿಯ್ತು ತನ್ನ ಆರೋಗ್ಯ, ಶಕ್ತಿ-ಸಾಮರ್ಥ್ಯ, ಸಮಾಯೋಜನೆ, ಸಾಧನೆ ಹಾಗೂ ಸಾಮರಸ್ಯಗಳನ್ನು ಸಂವರ್ಧಿಸಲು ಸಾಧ್ಯವಿದೆ. ಪ್ರಿಯ ವಿದ್ಯಾರ್ಥಿಗಳೆ ಬನ್ನಿ, ಇಂತಹ ಬಹುಮಹತ್ವದ ಪರಿಕಲ್ಪನೆಯಾದ ವ್ಯಕ್ತಿತ್ವದ ಕುರಿತು ತಿಳಿಯಲು ನಿಮಗೆ ಪ್ರೀತಿಯ ಆಮಂತ್ರಣ.

# ವ್ಯಕ್ತಿತ್ವವನ್ನು ಪ್ರಭಾವಿಸುವ ಅಂಶಗಳು

- ವ್ಯಕ್ತಿತ್ವವು ಹಲವಾರು ಸಂಗತಿಗಳಿಂದ ಪ್ರಭಾವಿಸಲ್ಪಡುತ್ತದೆ. ಅವು ಈ ಕೆಳಗಿನಂತಿವೆ:
- ಅನುವಂಶೀಯತೆ
- ಪರಿಸರ–ಭೌತಿಕ–ಸಾಮಾಜಿಕ–ಮಾನಸಿಕ
- ಪಾಲಕರ ಪ್ರಭಾವ–ಅವರ ಶಿಕ್ಷಣ, ಉದ್ಯೋಗ, ಆದಾಯ
- ನಿರ್ನಾಳ ಗ್ರಂಥಿ ಸ್ರಾವಗಳು–ಪಿಟುಟರಿ, ಥೈರಾಯ್ಡ್, ಅಡ್ರಿನಲ್ ಇತ್ಯಾದಿ
- ದೈಹಿಕ ರಚನೆ/ರೂಪ– ಎತ್ತರ, ತೂಕ, ಆರೋಗ್ಯ, ಅಂದ ಚಂದಗಳು–ಮುಖ ಮೂಗಿನ ಮಾಟ ಇತ್ಯಾದಿ

# ಕ್ರೆಶ್ಮರ್ ನ ವರ್ಗೀಕರಣ

- 1. ಗುಂಡುಕಾಯ (ಕಫಿಞಾಟುಫಿ)–ದುಂಡು ದುಂಡಾದ, ದಪ್ಪವಾದ ಶರೀರದವರು.
- ೨. ನೀಳಕಾಯ (ϙಣ್ಜಟುಫಿ)– ತೆಳ್ಳಗೆ ಬಳ್ಳಿಯಂತೆ, ರೋಗಿಯಂತೆ ಇರುವವರು.
- ೩. ಸದೃಢ ಕಾಯ (ϙಣ್ಟಜಣುಫಿ)–ಸದೃಢವಾದ. ಹುರಿಗೊಂಡ ಮಾಂಸಖಂಡ ಹಾಗೂ
- ಸಬಲ ಸ್ನಾಯುಗಳನ್ನು ಹೊಂದಿರುವವರು.
- 4. ಕುರೂಪಕಾಯ (ಆಫಿರಿಟಛಿಣುಫಿ)–ಅಂಗವಿಕಲತೆ. ಸಂಮ್ಮಿತಿ, ಸಮರೂಪವಿಲ್ಲದವರು.
- ಕ್ರೆಶ್ಮರ್ ಹೀಗೆ ನಾಲ್ಕು ವರ್ಗಗಳಲ್ಲಿ ಜನರನ್ನು ವರ್ಗೀಕರಿಸಿದ್ದಾನೆ.

# ವ್ಯಕ್ತಿತ್ವದ ವರ್ಗೀಕರಣ

- 1) ಉದರ ಪ್ರಧಾನ2) ಮಾಂಸಖಂಡಗಳ ಪ್ರಧಾನ 3) ಚರ್ಮ ಮತ್ತು ನರಗಳ ಪ್ರಧಾನ. ಈ ಅಂಶಗಳನ್ನು 7 ಹಂತಗಳ ಮಾಪನದಿಂದ ಅಳೆಯಬಹುದು ಎಂದು ಶೆಲ್ಡನ್ ಹೇಳಿದ್ದಾನೆ. ಶೆಲ್ಡನ್ ಪ್ರಕಾರ ಪ್ರತಿಯೊಬ್ಬನಲ್ಲಿ ಈ ಅಂಶಗಳು ಎಷ್ಟು ಪ್ರಮಾಣದಲ್ಲಿವೆ ಎಂದು ಖಚಿತವಾಗಿ ತಿಳಿದುಕೊಳ್ಳಬಹುದಾಗಿದೆ. ಉದಾ: ಒಬ್ಬ ವ್ಯಕ್ತಿಯಲ್ಲಿ ಮೊದಲನೆಯ ಅಂಶ (ಉದರ) 3; ಎರಡನೆಯ ಅಂಶ (ಮಾಂಸಖಂಡ) 5 ಮತ್ತು ಮೂರನೆಯ ಅಂಶ (ಚರ್ಮ, ನರ) 2 ಇರಬಹುದು.  ಒಟ್ಟಾಗಿ ಅದು 10 ಆಗುತ್ತದೆ.

- ವಿಸೆರೋಟೋನಿಯ (Viscerotonia)
- ಸೋಮಾಟೋ ಟೋನಿಯ (Somatotonia)
- ಸೆರಿಬ್ರೋಟೋನಿಯ (Cerebrotonia)

# ಸಿಗ್ಮಂಡ ಫ್ರಾಯ್ಡ್‌ನ ವ್ಯಕ್ತಿತ್ವ ಸಿದ್ಧಾಂತ

- ಶೈಶವ ಲೈಂಗಿಕತೆ – ಜನನದಿಂದ ಆರು ತಿಂಗಳು
- ಬಾಯಿಯ ಹಂತ – 6 ತಿಂಗಳಿಂದ ಒಂದು ವರ್ಷ
- ಗುದ ಹಂತ – 1-2 ವರ್ಷಗಳು
- ಶಿಶ್ನದ ಹಂತ –2-4 ವರ್ಷಗಳು
- ಸುಪ್ತಾವಸ್ಥೆ – 6-12 ವರ್ಷಗಳು
- ಜನನೇಂದ್ರಿಯ ಹಂತ 12 ವರ್ಷಗಳ ನಂತರ
- ಸ್ಥಿರೀಕರಣ–ಈಟಥಚಿಣುರಿಟಿ, ಇಚುರಿಣ ಥಿರಿಟಟರಿಟಜಥ

# ಯೂಂಗ್‌ನ ವ್ಯಕ್ತಿತ್ವದ ಪ್ರಕಾರಗಳು

- ಅಂತರ್ಮುಖಿಗಳ ಮುಖ್ಯಲಕ್ಷಣಗಳು
- ಅವರಲ್ಲಿ ಸ್ವಯಂನಿಷ್ಠೆ ಹೆಚ್ಚು. ಸಂಶಯದ ಸ್ವಭಾವದವರಾಗಿರುತ್ತಾರೆ. ಅವರು ತುಂಬಾ ಆಲೋಚನೆ ಮಾಡುತ್ತಾರೆ ಆದರೆ ಕಡಿಮೆ ಮಾತನಾಡುತ್ತಾರೆ. ಏಕಾಂತಪ್ರಿಯರಾಗಿರುವ ಅವರದು ಗುಪ್ತಮನೋಭಾವ, ಮತ್ತು ಜಡ ಸ್ವಭಾವವಾಗಿರುತ್ತದೆ. ಅವರು ಅತಿ ಸಂವೇದನೆಗೆ ಒಳಗಾಗುತ್ತಾರೆ. ಇತರರ ವ್ಯಂಗ್ಯ, ವಿಡಂಬನೆ ಹಾಗೂ ಅವಮಾನದಿಂದ ಮನಸ್ಸಿಗೆ ತುಂಬಾ ಬೇಸರ ಮಾಡಿಕೊಂಡು ಕೊರಗುತ್ತಾರೆ.

# ಅಂತರ್ಮುಖಿಗಳು

- ಅಂತರ್ಮುಖಿಗಳು ಹಗಲುಗನಸು ಕಾಣುತ್ತಾರೆ.  ತಮ್ಮ ವಿಚಾರ, ಭಾವನೆ,  ವರ್ತನೆಗಳನ್ನು ಕೂಲಂಕಷವಾಗಿ ವಿಶ್ಲೇಷಿಸುತ್ತಾರೆ. ತಮ್ಮ ಭಾವನೆಗಳನ್ನು ಅದುಮಿಟ್ಟುಕೊಂಡು ನಿಯಂತ್ರಿಸುತ್ತಾರೆ.
- ಇವರಲ್ಲಿ ಸಹಾನುಭೂತಿ ಮತ್ತು ಅನುಕಂಪವಿರುವುದಿಲ್ಲ. ಅಲ್ಲದೇ ಇವರು ಸ್ವಾರ್ಥಿಗಳು, ಆತ್ಮಾಭಿಮಾನಿಗಳು, ಸಂಗವಿರೋಧಿಗಳು ಹಾಗೂ ನಿಪುಣರಾಗಿರುತ್ತಾರೆ.
- ಮನದ ಗುಟ್ಟುಗಳನ್ನು ಕಾಪಾಡುವ ಇವರಿಗೆ ಬಯಲು ಕ್ರೀಡಾಂಗಣದಲ್ಲಿ ಆಡುವ ಆಟಗಳಲ್ಲಿ ಆಸಕ್ತಿಯಿರುವುದಿಲ್ಲವೆಂದು ಯೂಂಗ್ ಗುರುತಿಸಿದ್ದಾರೆ.

# ಬಹಿರ್ಮುಖಿಗಳ ಲಕ್ಷಣಗಳು

- ಇವರು ವಸ್ತುನಿಷ್ಠ ವಿಚಾರಗಳನ್ನು ಮಾಡುತ್ತಾರೆ. ತುಂಬಾ ಮಾತನಾಡುತ್ತಾರೆ. ಅದಕ್ಕಾಗಿ ಸದಾ ಇತರರ ಸಂಗ ಮತ್ತು ಸ್ನೇಹದಲ್ಲಿರಲು ಬಯಸುತ್ತಾರೆ.
- ದೈನಂದಿನ ವ್ಯವಹಾರದ ಗುಟ್ಟುಗಳನ್ನು ರಟ್ಟುಮಾಡುವುದರಲ್ಲಿ ಇವರು ಅಪಾರ ಆಸಕ್ತಿ ತೋರುತ್ತಾರೆ
- ಇವರು ವಿವಿಧ ರೀತಿಯ ಪ್ರಯೋಗ-ಪರೀಕ್ಷೆಗಳನ್ನು ಮಾಡಲು ಮುನ್ನುಗ್ಗುತ್ತಾರೆ

# ಬಹಿರ್ಮುಖಿಗಳ ಲಕ್ಷಣಗಳು

- 4. ಬಹಿರ್ಮುಖಿಗಳದು ಸಬಲ ಮನಸ್ಸು. ಅವರಲ್ಲಿ ಸಂಶಯವಿರುವುದಿಲ್ಲ.
- ಇತರರು ತಮ್ಮ ಬಗ್ಗೆ  ಮಾಡುವ ಟೀಕೆಯ ನಿರ್ಲಕ್ಷ ಇವರ ಸಹಜ ಸ್ವಭಾವವಾಗಿದೆ.
- 5. ತಮ್ಮ ಮನಸ್ಸಿನ ಆಳದ ಭಾವನೆಗಳನ್ನು ಹೆದರಿಕೆ ಮತ್ತು ಹಿಂಜರಿಕೆಯಿಲ್ಲದೆ ವ್ಯಕ್ತಪಡಿಸುತ್ತಾರೆ.
- 6. ಆತ್ಮವಿಶ್ವಾಸ, ಉದಾರತೆ ಹಾಗೂ ಧಾರಾಳತನಗಳು ಸಾಕಷ್ಟು ಪ್ರಮಾಣದಲ್ಲಿ ಇವರಲ್ಲಿ ಇರುತ್ತವೆ.
- 7. ಕ್ರೀಡಾ ಮನೋಭಾವ ಸಕ್ರಿಯತೆ ಮತ್ತು ಉತ್ಸಾಹಗಳು ಇವರಲ್ಲಿ ಅಪಾರವಾಗಿರುತ್ತವೆ.